## ‘ವಿಡಿಯೊ ಲೈಕ್’ ಕೆಲಸ: ವಂಚನೆ

ಬೆಂಗಳೂರು: ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವ ವಿಡಿಯೊಗಳನ್ನು ಲೈಕ್ ಹಾಗೂ ಶೇರ್ ಮಾಡಿದರೆ ಹಣ ನೀಡುವುದಾಗಿ ಹೇಳಿ ಶುಲ್ಕದ ಹೆಸರಿನಲ್ಲಿ ₹ 7.32 ಲಕ್ಷ ಪಡೆದು ವಂಚಿಸಲಾಗಿದೆ.

‘ಹುಳಿಮಾವು ನಿವಾಸಿಯಾಗಿರುವ 25 ವರ್ಷದ ಯುವಕ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಹೇಳಿದರು.

‘ದೂರುದಾರರ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದ ಆರೋಪಿಗಳು, ‘ನಾನು ವಿಡಿಯೊ ಮಾರುಕಟ್ಟೆ ಕಂಪನಿ ಪ್ರತಿನಿಧಿ. ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವ ನಮ್ಮ ವಿಡಿಯೊಗಳನ್ನು ಲೈಕ್ ಹಾಗೂ ಶೇರ್ ಮಾಡಿದರೆ, ಪ್ರತಿ ವಿಡಿಯೊಗೆ ₹ 150 ನೀಡಲಾಗುವುದು’ ಎಂದಿದ್ದರು.






## ಸಿಎನ್ ಸೂಪರ್ ಸಮ್ಮರ್ ಸ್ಕ್ವಾಡ್ ಮೇ 21ಕ್ಕೆ



ಬೆಂಗಳೂರು: ಲುಲು ಮಾಲ್‌ನಲ್ಲಿ ‘ಸಿಎನ್ ಸೂಪರ್ ಸಮ್ಮರ್ ಸ್ಕ್ವಾಡ್’ ಮೇ 21ರಂದು ನಡೆಯಲಿದೆ.

ಮಕ್ಕಳ ಬೇಸಿಗೆ ರಜೆಗಳನ್ನು ಮತ್ತಷ್ಟು ರೋಮಾಂಚನಕಾರಿ ಮಾಡಲು ‘ಲುಲು ಮಾಲ್‌ನ ಕಾರ್ಟೂನ್ ನೆಟ್‌ವರ್ಕ್ ಮತ್ತು ಸಿಎನ್ ಸೂಪರ್ ಸಮ್ಮರ್ ಸ್ಕ್ವಾಡ್ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಮಕ್ಕಳಿಗೆ ತಮ್ಮ ನೆಚ್ಚಿನ ಸೂಪರ್ ಸ್ಟಾರ್‌ಗಳಾದ ಬೆನ್‌10, ಸ್ಕೂಬಿ, ಟೀನ್ ಟೈಟಾನ್ಸ್ ಗೋ, ಅವರೊಂದಿಗೆ ಸಂವಾದಾತ್ಮಕ ಆಟಗಳು, ಕಾರ್ಯಾಗಾರ, ಫೋಟೊಬೂತ್ ಟ್ಯಾಟೂಗಳು ಮತ್ತು ಸಂವಾದ ಕಾರ್ಯಕ್ರಮಗಳಿವೆ ಎಂದು ಪ್ರಕಟಣೆ ತಿಳಿಸಿದೆ.


**ನೈಋತ್ಯ ರೈಲ್ವೆ**

ಇ–ಟೆಂಡರು ಸೂಚನೆ ಸಂ.: ECN-TRD-06-2023-RT2
ದಿನಾಂಕ: 11.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| ಪ್ರಸ್ತುತವಿರುವ ಓಹೆಚ್‌ಇ ಅನ್ನು ಮಾರ್ಪಡಿಸುವಿಕೆ ಮತ್ತು ಎರಡು ಹೊಸ ಲೂಪ್ ಲೈನ್‌ಗಳನ್ನು ವಿದ್ಯುದೀಕರಣಗೊಳಿಸುವುದು (ರಸ್ತೆ–5 ಮತ್ತು ರಸ್ತೆ–6) | ರೂ. 1,90,49,558.60 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.05.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್ ವಿನಿಯೋಗ, ಬೆಂಗಳೂರು ದಂಡು

PUB/91/AAD/PRB/SWR/2023-24

S.W.Railways SWRRLY SWRRLY



**ನೈಋತ್ಯ ರೈಲ್ವೆ**

ಇ–ಟೆಂಡರು ಸೂಚನೆ ಸಂ.: 10/2023
ದಿನಾಂಕ: 11.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಐಟಂಗಳ ಪೂರೈಕೆಗಾಗಿ ಕೇವಲ ಐಆರ್‌ಇಪಿಎಸ್ ಮೂಲಕವಾಗಿ ಮಾತ್ರ ಇ–ಟೆಂಡರನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ: ಟಿಸಿಎನ್ ಓಪನ್ ಸ್ಟಾಂಡರ್ಡ್ ಸಿಎಲ್ ಡಬ್ಲ್ಯೂ/ಸಿ ಡಿ&ಡಿ/ಇಎಸ್/3 ಆಧಾರದ ಮೇಲೆ ವೆಹಿಕಲ್ ಕಂಟ್ರೋಲ್ ಯೂನಿಟ್‌ನ (ವಿಸಿಯು) ಪೂರೈಕೆ (ಪರಿಮಾಣ: 01 ಸೆಟ್) (ಟೆಂಡರು ಸಂ. ಎಲ್‌8235735)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.06.2023, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

PUB/89/AAD/PRB/SWR/2023-24

S.W.Railways SWRRLY SWRRLY



**ನೈಋತ್ಯ ರೈಲ್ವೆ**

ಇ–ಟೆಂಡರು ಸೂಚನೆ ಸಂ.: B/TRD.2023-24/02
ದಿನಾಂಕ: 12.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| (1) ರಾಜನಕುಂಟೆ ಮತ್ತು ದೊಡ್ಡಬಳ್ಳಾಪುರ ನಿಲ್ದಾಣಗಳ ನಡುವೆ ಕಿಮೀ. 35/900–36/00 ರಲ್ಲಿ ಎನ್‌ಹೆಚ್‌ಎಐಯ ಪ್ರಸ್ತಾವಿತ ಆರ್‌ಓಬಿ ಸಂ. 478ಎ ಯ ಕಾರಣ ಓಹೆಚ್‌ಇಯ ಮೇಲಿನ ಬದಲಾವಣೆ ಕಾರ್ಯ. (2) ತೊಂಡೇಭಾವಿ ವಿಭಾಗದಲ್ಲಿ ಆರ್‌ಡಿ–3 ಎಸಿಸಿ/ಎಂಎಪಿಟಿಂಯು ಸೈಡಿಂಗ್‌ನಲ್ಲಿ ಹೊಸ ಐಸೊಲೇಟರ್‌ನ ಪೂರೈಕೆ. | ರೂ. 13,64,610.75 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.06.2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್, ಟ್ರ್ಯಾಕ್ಷನ್ ವಿನಿಯೋಗ (ನಿರ್ಮಾಣ), ಬೆಂಗಳೂರು

PUB/92/AAD/PRB/SWR/2023-24

S.W.Railways SWRRLY SWRRLY



ಬ್ಯಾಂಕ್ ಆಫ್ ಇಂಡಿಯಾ Bank of India BOI

ಬೆಂಗಳೂರು ವಲಯ ಕಛೇರಿ, ಆಡಳಿತ ಮತ್ತು ಸೇವೆ ವಿಭಾಗ, ನಂ.11, ಬ್ಯಾಂಕ್ ಆಫ್ ಇಂಡಿಯಾ ಬಿಲ್ಡಿಂಗ್, ಕೆ.ಜಿ.ರಸ್ತೆ, ಬೆಂಗಳೂರು–560 009. ಫೋನ್ : 080–2295 9419/417. ಇ–ಮೇಲ್ : Bengaluru.AandS@bankofindia.co.in

ಬ್ಯಾಂಕಿನ ವಾಹನ ಮಾರಾಟಕ್ಕೆ

| ಕ್ರಸಂ | ವಾಹನ ನೋಂದಣಿ ಸಂಖ್ಯೆ | ತಯಾರಿಕೆ ಮತ್ತು ಮಾಡೆಲ್ | ಮೀಸಲು ಬೆಲೆ |
|---|---|---|---|
| 1. | KA 02 MH 5187 | Maruti SX4 VXI(BSIV) | ರೂ.1,50,000/– +ಜಿ.ಎಸ್.ಟಿ |

ಹೆಚ್ಚಿನ ವಿವರಗಳಿಗೆ ನಮ್ಮ ಬ್ಯಾಂಕಿನ ವೆಬ್ ಸೈಟ್ www.bankofindia.co.in ನ ಟೆಂಡರ್ ವಿಭಾಗದಲ್ಲಿ ಲಾಗ್ ಆನ್ ಮಾಡಿ ನೋಡಬಹುದು ಅಥವಾ ಯಾವುದೇ ಕೆಲಸದ ದಿನ ಕಛೇರಿ ಸಮಯದಲ್ಲಿ ನಮ್ಮ ವಲಯ ಕಚೇರಿಯನ್ನು ಸಂಪರ್ಕಿಸಿ.

16.05.2023 ವಲಯ ವ್ಯವಸ್ಥಾಪಕರು



**ಪ್ರಕಟಣೆ**

**ಟಿಮ್‌ಕೆನ್ ಇಂಡಿಯಾ ನಿಯಮಿತ**
CIN - L29130KA1996PLC048230

ನೋಂದಣಿ ಕಛೇರಿ: ಸಂಖ್ಯೆ. 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ–ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

**ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗೆ ವರ್ಗಾಯಿಸಲು ಷೇರುದಾರರಿಗೆ ಸೂಚನೆ**

ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗಳ ಪ್ರಾಧಿಕಾರ (ಲೆಕ್ಕಪತ್ರ, ಪರಿಶೋಧನೆ, ವರ್ಗಾವಣೆ ಮತ್ತು ಹಿಂದಿರುಗಿಸುವುದು) ನಿಯಮ, 2016 ಆಗಿಂದಾಗ್ಗೆ ಬದಲಾವಣೆಯಾದ ಪ್ರಕಾರವಾಗಿ (“ಈ ನಿಯಮಗಳು”) ಸಂಸದೀಯ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರದಿಂದ ಸೂಚಿಸಲಾಗಿದೆ ಎಂದು ಓದಿಕೊಳ್ಳುವ ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳಿಗೆ ಅನುಗುಣವಾಗಿ ಈ ಸೂಚನೆಯನ್ನು ಪ್ರಕಟಿಸಲಾಗಿದೆ.

ಈ ನಿಯಮಗಳು, ಇನ್ನಿತರ ವಿಷಯಗಳೊಂದಿಗೆ, ಸತತವಾಗಿ ಏಳು ವರ್ಷಗಳಿಗೆ ಕೇಂದ್ರ ಸರ್ಕಾರ ಸ್ಥಾಪಿಸಿದ ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗೆ (‘ಐಇಪಿಎಫ್’) ಡಿವಿಡೆಂಡ್‌ಗಳನ್ನು ಪಾವತಿಸದೆ ಅಥವಾ ಷೇರುದಾರರು ಪಡೆಯದೆ ಇರುವ ಎಲ್ಲಾ ರೀತಿಯ ಷೇರುಗಳಿಗೆ ಸಂಬಂಧಿಸಿದಂತೆ ವರ್ಗಾವಣೆಯನ್ನು ಒದಗಿಸುವುದು. ಅದರಂತೆ, ಸದರಿ ನಿಯಮದ ಅಡಿಯಲ್ಲಿ ಯಾರ ಷೇರುಗಳು ಐಇಪಿಎಫ್ ಡೀಮ್ಯಾಟ್ ಖಾತೆಗೆ 2023 ರ ಸೆಪ್ಟೆಂಬರ್ ತಿಂಗಳಲ್ಲಿ ವರ್ಗಾಯಿಸಲು ಅನ್ವಯಿಸುವಂತಹ ಸಂಬಂಧಿತ ಷೇರುದಾರರಿಗೆ ಸೂಚನೆ ನೀಡಿದೆ. ಕಂಪನಿಯು ಇಂತಹ ಷೇರುದಾರರ ಮತ್ತು ಐಇಪಿಎಫ್‌ಗೆ ಡೀಮ್ಯಾಟ್ ಖಾತೆಗೆ ವರ್ಗಾಯಿಸಲು ನಿಶ್ಚಯಿಸಿರುವ ಷೇರುಗಳ ವಿವರಗಳನ್ನು ತನ್ನ ವೆಬ್‌ಸೈಟ್ @https://www.timken.com/en-in/investors/statutory-compliances/ಕಂಪನಿ ನಲ್ಲಿ ಅಪ್‌ಲೋಡ್ ಮಾಡಿದೆ. ಕಂಪನಿಯು ಸಂಬಂಧಿತ ಷೇರುದಾರರಿಗೆ ಅಗತ್ಯವಿರುವ ಕ್ರಮ ಕೈಗೊಳ್ಳಲು ಲಭ್ಯವಿರುವ ಇತ್ತೀಚಿನ ವಿಳಾಸಕ್ಕೆ ಪ್ರತ್ಯೇಕವಾದ ಸಂದೇಶವನ್ನು ರವಾನಿಸಿದೆ.

ಐಇಪಿಎಫ್‌ಗೆ ವರ್ಗಾಯಿಸದೆ ಉಳಿದಿರುವ ಷೇರುಗಳ ಬಗ್ಗೆ 2015–16 ಹಾಗೂ ಮುಂದಿನ ಸಾಲುಗಳ (ಗಳಿಗೆ), ಯಾವುದೇ ಪಡೆಯದೆ ಉಳಿದಿರುವ ಅಂತಿಮ ಡಿವಿಡೆಂಡ್ ಅನ್ನು ಪಡೆಯಲು ಕಂಪನಿ / ರಿಜಿಸ್ಟ್ರಾರ್ ಹಾಗೂ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಗೆ 31 ಆಗಸ್ಟ್, 2023 ರೊಳಗೆ ತಮ್ಮ ಅರ್ಜಿಯನ್ನು ಸಲ್ಲಿಸಲು ಸಂಬಂಧಪಟ್ಟ ಎಲ್ಲಾ ಷೇರುದಾರರಿಗೆ ಮನವಿ ಮಾಡಲಾಗಿದೆ. ತಾವುಗಳು ಗಮನಿಸಬೇಕಾದ ಅಂಶವೇನೆಂದರೆ ಮೇಲಿನ ನಿಗಧಿತ ದಿನದೊಳಗೆ ತಮಗೆ ಸಲ್ಲಬೇಕಾದ ಡಿವಿಡೆಂಡ್‌ಗಾಗಿ ಅರ್ಜಿ ಸಲ್ಲಿಸಲು ವಿಫಲವಾದರೆ, ಕಂಪನಿಯು ಮುಂದೆ ಷೇರುದಾರರಿಗೆ ಯಾವುದೇ ಸೂಚನೆ ನೀಡದೆ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವುದಲ್ಲದೆ ಬೇರೆ ದಾರಿ ಇರುವುದಿಲ್ಲ. ಷೇರುದಾರರಿಗೆ ತಿಳಿಸುವುದೇನೆಂದರೆ ಐಇಪಿಎಫ್‌ಗೆ ಷೇರುಗಳನ್ನು ವರ್ಗಾಯಿಸುವ ಉದ್ದೇಶ : ಕಂಪನಿಯು ತಾವು ಹೊಂದಿರುವ ಮೂಲ ಷೇರು ಪ್ರಮಾಣ ಪತ್ರ (ಗಳು)ದ ಬದಲಾಗಿ ಷೇರು ಪ್ರಮಾಣ ಪತ್ರ (ಗಳ)ದ ಪ್ರತಿಯನ್ನು ನೀಡುವುದು ಮತ್ತು ಇಂತಹ ಸಂದರ್ಭದಲ್ಲಿ, ಮೂಲ ಷೇರು ಪ್ರಮಾಣ ಪತ್ರ (ಗಳ)ದ ನೋಂದಾಯಿಸಲಾದ ತಮ್ಮ ಹೆಸರು ನಿಯಮಾನುಸಾರ ರದ್ದುಗೊಳ್ಳುತ್ತದೆ.

ಈ ಮೂಲಕ ಸೂಚಿಸುವುದೇನೆಂದರೆ ಐಇಪಿಎಫ್‌ಗೆ ವರ್ಗಾಯಿತಗೊಂಡ ಷೇರುಗಳು, ಯಾವುದೇ ಷೇರಿಗಗಳಿಗೆ ಅನ್ವಯಿಸುವ ಎಲ್ಲಾ ಸೌಲಭ್ಯಗಳು ಇದ್ದಲ್ಲಿ, ಇದನ್ನು ಒಳಗೊಂಡಂತೆ ಐಇಪಿಎಫ್ ಪ್ರಾಧಿಕಾರದಿಂದ ನಿಯಮದ ಅನುಸಾರ ಇವೆಲ್ಲವನ್ನು ಅನುಸರಿಸಿ ಅಂತಹ ಷೇರುಗಳನ್ನು ಪಡೆಯಬಹುದು. ಈ ವಿಷಯದ ಬಗ್ಗೆ ಸ್ಪಷ್ಟತೆಗಾಗಿ, ಕಂಪನಿ ರಿಜಿಸ್ಟ್ರಾರ್ಸ್ ಅಂಡ್ ಷೇರ್ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ), ಸಿಬಿ ಮ್ಯಾನೇಜ್‌ಮೆಂಟ್ ಸರ್ವಿಸಸ್ (ಪ್ರೈ) ಲಿಮಿಟೆಡ್, ಪಿ–22, ಬಾಂಡೆಲ್ ರಸ್ತೆ, ಕೋಲ್ಕತಾ – 700019 ದೂರವಾಣಿ ಸಂಖ್ಯೆ 033: 4011 6700/6725/6729, ಫ್ಯಾಕ್ಸ್ ಸಂಖ್ಯೆ 033–4011 6739, ಇ–ಮೇಲ್: rta@cbmsl.com, website: www.cbmsl.com ಮೂಲಕ ಸಂಪರ್ಕಿಸಬಹುದು.

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/– ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

ಸ್ಥಳ: ಬೆಂಗಳೂರು
ದಿನಾಂಕ: 15 ಮೇ, 2023


### ಸಹಕಾರ ಸಂಘಗಳ ಪದಾಧಿಕಾರಿಗಳ ಪದಚ್ಯುತಿ ಪ್ರಕರಣ

# ಅವಿಶ್ವಾಸ ನಿರ್ಣಯಕ್ಕೆ ಕಾರಣ ಬೇಕಿಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಸಹಕಾರ ಸಂಘಗಳ ಅಧ್ಯಕ್ಷ ಮತ್ತು ಪದಾಧಿಕಾರಿಗಳ ವಿರುದ್ಧ ಶೇ 33ರಷ್ಟು ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸಿದರೆ ಅದಕ್ಕೆ ಕಾರಣ ನೀಡುವ ಅಗತ್ಯವಿಲ್ಲ. ಆದರೆ, ನಿಯಮಾನುಸಾರ 15 ದಿನಗಳ ಮುಂಚಿತವಾಗಿ ನೋಟಿಸ್ ನೀಡಿದರೆ ಸಾಕು‘ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಬೆಳಗಾವಿಯ ಶ್ರೀ ಮಲಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆ ಸೊಸೈಟಿ ಅಧ್ಯಕ್ಷ ನಾಸಿರುದ್ದೀನ್ ಭಗವಾನ್ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದ್ದು, ’ಒಂದು ವೇಳೆ ಮೂರನೇ ಒಂದರಷ್ಟು ಅಂದರೆ ಶೇ 33ರಷ್ಟು ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸಿದ್ದರೆ, ಯಾವುದೇ ಕಾರಣ ನೀಡುವ ಅಗತ್ಯವಿಲ್ಲ‘ ಎಂದು ಸ್ಪಷ್ಟಪಡಿಸಿದೆ.

‘ಸೊಸೈಟಿಯ ಸದಸ್ಯರು ಮಂಡಿಸಿರುವ ಅವಿಶ್ವಾಸ ನಿರ್ಣಯದ ಕುರಿತು ರಿಜಿಸ್ಟ್ರಾರ್ ತೃಪ್ತರಾದರೆ ಸಾಕು. ಯಾರ ವಿರುದ್ಧ ಅವಿಶ್ವಾಸ ಮಂಡಿಸಲಾಗಿದೆಯೋ ಅಂತಹವರೂ ಸೇರಿದಂತೆ ಎಲ್ಲ ಸದಸ್ಯರಿಗೆ 15 ದಿನಗಳ ಮುಂಚಿತವಾಗಿಯೇ ನೋಟಿಸ್ ನೀಡಿ ನಿಯಮ ಪಾಲಿಸಬೇಕಾಗುತ್ತದೆ. ನೋಟಿಸ್ ನೀಡಿದ ನಂತರ ಯಾರ ವಿರುದ್ಧ ಅವಿಶ್ವಾಸ ಮಂಡಿಸಲಾಗಿರುತ್ತದೆಯೋ ಅಂತಹವರು ಇಚ್ಛಿಸಿದರೆ ಇತರೆ ಪದಾಧಿಕಾರಿಗಳನ್ನು ಹಾಗೂ ಸದಸ್ಯರನ್ನು ಭೇಟಿ ಮಾಡಿ ನೋಟಿಸ್ ವಾಪಸ್ ಪಡೆಯಲು ಮನವೊಲಿಸಬಹುದು‘ ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ.

**ಪ್ರಕರಣವೇನು?:** ಶ್ರೀ ಮಲಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆ ಸೊಸೈಟಿ ಅಧ್ಯಕ್ಷ ನಾಸೀರುದ್ದೀನ್ ಭಗವಾನ್ ವಿರುದ್ಧ 2023ರ ಮಾರ್ಚ್‌ನಲ್ಲಿ 9 ಸದಸ್ಯರು ಅವಿಶ್ವಾಸ ಮಂಡನೆ ನಿರ್ಣಯ ನೋಟಿಸ್ ಕಳುಹಿಸಿದ್ದರು. ಈ ನಿಟ್ಟನಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಲು ಅಧಿಕಾರಿ ನಿಯೋಜನೆಗಾಗಿ 7 ದಿನಗಳಿಗೂ ಹೆಚ್ಚು ಕಾಲ ತೆಗೆದುಕೊಂಡಿದ್ದಾರೆ. ನನಗೆ ನೋಟಿಸ್ ಪ್ರತಿಯನ್ನು ನೀಡಿಲ್ಲ ಹಾಗೂ ಕಾರಣವನ್ನೂ ಉಲ್ಲೇಖಿಸಿಲ್ಲ ಎಂದು ಆಕ್ಷೇಪಿಸಿದ್ದ ನಾಸಿರುದ್ದೀನ್, ಹೈಕೋರ್ಟ್ ಮೆಟ್ಟಿಲೇರಿದ್ದರು.

# ರಸ್ತೆಗೆ ಉರುಳಿದ ಬೃಹತ್ ಮರ: ತಪ್ಪಿದ ಅನಾಹುತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ಬೆಂಗಳೂರು ಕ್ಲಬ್ ಆವರಣದಲ್ಲಿದ್ದ ಮರವೊಂದು ರಸ್ತೆಗೆ ಅಡ್ಡಲಾಗಿ ಬಿದ್ದಿದ್ದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಯಾವುದೇ ಅಪಾಯ ಸಂಭವಿಸಿಲ್ಲ.

ಸ್ಥಳಕ್ಕೆ ಬಂದ ಅಶೋಕ ನಗರ ಸಂಚಾರ ಪೊಲೀಸರು ಮರ ತೆರವುಗೊಳಿಸಿ ವಾಹನ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

‘ಬಿದ್ದ ಮರವು ಹಳೆಯದಾಗಿತ್ತು. ಮರಕ್ಕೆ ಗೆದ್ದಲು ತಗುಲಿದ್ದರಿಂದ ಟೊಳ್ಳಾಗಿತ್ತು. ಸೋಮವಾರ ಸಂಜೆ 4.50ರ ಸಮಯಕ್ಕೆ ರಸ್ತೆಗೆ ಅಡ್ಡಲಾಗಿ ಬಿದ್ದಿದೆ. ಸಂಜೆ ಕಚೇರಿಯಿಂದ ಮನೆಗೆ ತೆರಳುವವರ ಸಂಖ್ಯೆ ಹೆಚ್ಚಾಗಿತ್ತು. ಇದರಿಂದ ಮಿಷನ್ ರಸ್ತೆ ಹಾಗೂ ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿ ಅರ್ಧ ತಾಸು ವಾಹನಗಳ ಸಂಚಾರ ಬಂದ್ ಆಗಿತ್ತು. ಸ್ಥಳೀಯರು ಹಾಗೂ ಪೊಲೀಸರು ಮರವನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಿದರು ಎಂದು ಸ್ಥಳೀಯರು ತಿಳಿಸಿದರು.

ಅಶೋಕ ನಗರ ಪೊಲೀಸರು ಅದೇ ವೃತ್ತದಲ್ಲಿ ಕರ್ತವ್ಯದಲ್ಲಿದ್ದರು. ಕಾನ್‌ಸ್ಟೆಬಲ್ ಅರುಣ್ ಮರ ಬೀಳುತ್ತಿರುವುದನ್ನು ಗಮನಿಸಿ ವಾಹನಗಳನ್ನು ಮುಂದಕ್ಕೆ ಸಾಗುವುದನ್ನು ತಡೆದಿದ್ದರು. ಇದರಿಂದ ಅನಾಹುತ ತಪ್ಪಿದೆ.

ಕಾಂಪೌಂಡ್ ಸಮೀಪದಲ್ಲೇ ಸಾಯಿ ಈಶ್ವರ್ ಎಂಬುವವರು ಕ್ಯಾಬ್‌ಗೆ ಕಾಯುತ್ತಿದ್ದರು. ಅವರಿಗೆ ಮರ ಕೊಂಬೆ ತಗುಲಿ ಸಣ್ಣಪುಟ್ಟ ಗಾಯಗಳಾಗಿವೆ. ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ಬಿಬಿಎಂಪಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

’ಪೊಲೀಸರು ಸಕಾಲದಲ್ಲಿ ಎಚ್ಚೆತ್ತು ಸಾರ್ವಜನಿಕರಿಗೆ ಮಾಹಿತಿ ನೀಡಿದ್ದರಿಂದ ಅಪಾಯ ತಪ್ಪಿದೆ. ಬಿಬಿಎಂಪಿ ಅಧಿಕಾರಿಗಳು ಕೆಲವು ದಿನಗಳ ಹಿಂದಷ್ಟೇ ಬಂದು ಮರಗಳ ಲೆಕ್ಕ ತೆಗೆದುಕೊಂಡಿದ್ದರು. ಅಪಾಯಕಾರಿ ಮರಗಳ ಕೊಂಬೆ ತೆರವು ಮಾಡಲು ಅರಣ್ಯ ಇಲಾಖೆ ಅನುಮತಿ ನಿರೀಕ್ಷೆಯಲ್ಲಿದ್ದೆವು. ಅಲ್ಲದೇ ಶೇ 50ರಷ್ಟು ಮರಗಳಲ್ಲಿ ಒಣಗಿದ ಕೊಂಬೆಗಳನ್ನು ಕಡಿಯಲಾಗಿತ್ತು. ಈ ಘಟನೆ ಹೇಗೆ ನಡೆಯಿತು ಎಂಬುದು ತಿಳಿದಿಲ್ಲ’ ಎಂದು ಬೆಂಗಳೂರು ಕ್ಲಬ್‌ನ ಕಾರ್ಯದರ್ಶಿ ಲೊಧ್ ಹೇಳಿದರು.



ರೆಸಿಡೆನ್ಸಿ ರಸ್ತೆಯಲ್ಲಿ ಉರುಳಿದ ಮರವನ್ನು ತೆರವುಗೊಳಿಸಲಾಯಿತು.

## ದಕ್ಷಿಣ ಒಳನಾಡಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಒಳನಾಡು ವ್ಯಾಪ್ತಿಯ ಚಾಮರಾಜನಗರ, ಕೊಡಗು, ಮಂಡ್ಯ, ಮೈಸೂರು, ರಾಮನಗರ ಜಿಲ್ಲೆಗಳಲ್ಲಿ ಮಂಗಳವಾರ ಹಾಗೂ ಬುಧವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳು, ಕರಾವಳಿ ಹಾಗೂ ಉತ್ತರ ಒಳನಾಡಿನಲ್ಲಿ ಒಣಹವೆ ಇರಲಿದೆ. ಕರಾವಳಿ ಹಾಗೂ ಉತ್ತರ ಒಳನಾಡು ಭಾಗದಲ್ಲಿ ಸಾಮಾನ್ಯಕ್ಕಿಂತ ಉಷ್ಣಾಂಶವು 2 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಲಿದೆ ಎಂದು ಎಚ್ಚರಿಕೆ ನೀಡಿದೆ.


**ನೈಋತ್ಯ ರೈಲ್ವೆ**

ಇ–ಟೆಂಡರು ಸೂಚನೆ ಸಂ. CAO/CN/BNC/12/2023
ದಿನಾಂಕ: 11.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕ್ರಸಂ. | ಕಾಮಗಾರಿಯ ಹೆಸರು | ಅಂದಾಜು ಮೌಲ್ಯ |
|---|---|---|
| 1 | ಬೆಂಗಳೂರು ಕಂಟೋನ್ಮೆಂಟ್ ಯಾರ್ಡ್: ಎಫ್‌ಓಬಿ ಸಂ. 3 ರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣದ ಪ್ಲಾಟ್‌ಫಾರ್ಮ್ ಸಂ. 2 & 3 ರ ಅಗಲೀಕರಣ ಮತ್ತು ಪುನರಾಭಿವೃದ್ಧಿ (ಟೆಂಡರು ಉಲ್ಲೇಖ ಸಂ.: BNC-FOB-PF-2-3-R) | ರೂ. 1,19,34,941/- |
| 2 | ಗದಗ–ವಾಡಿ ಹೊಸ ಬಿಜಿ ಲೈನ್: ಲಿಂಗನಬಂಡಿ–ಹಣಮಾಪುರ ನಿಲ್ದಾಣಗಳ ನಡುವೆ ಕಿಮೀ. 42.625 ರಿಂದ ಕಿಮೀ. 44.600 ವರೆಗೆ ಹೆಚ್ಚಿನ ಸಾಮರ್ಥ್ಯವುಳ್ಳ ಸೂಕ್ತವಾದ ಆ್ಯಂಕರ್ ವ್ಯವಸ್ಥೆಯೊಂದಿಗೆ ಸ್ಟೀಲ್ ವೈರ್ ರೋಪ್ ನೆಟ್ ಮತ್ತು ಟರ್ಫ್ ಬಲವರ್ಧಿತ ಮ್ಯಾಟ್ ಮೂಲಕ ಬಂಡೆಗಳ ಉರುಳುವಿಕೆಯನ್ನು ತಡೆಯುವುದು ಮತ್ತು ಸ್ಲೋಪ್‌ಗಳನ್ನು ಕತ್ತರಿಸುವ ಮೂಲಕ ಸ್ಥಿರೀಕರಣಗೊಳಿಸುವುದು. (ಟೆಂಡರು ಉಲ್ಲೇಖ ಸಂ.: GDG-WD-48-R) | ರೂ. 22,86,86,373/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಕ್ರ.ಸಂ. 1ಕ್ಕೆ ದಿನಾಂಕ 30.05.2023 ರಂದು ಹಾಗೂ ಕ್ರ.ಸಂ. 2ಕ್ಕೆ ದಿನಾಂಕ 01.06.2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ದಂಡು

PUB/90/AAD/PRB/SWR/2023-24

S.W.Railways SWRRLY SWRRLY



**ಸಾರ್ವಜನಿಕ ಪ್ರಕಟಣೆ**

ನನ್ನ ಕಕ್ಷಿದಾರರಾದ ಶ್ರೀ ವೆಂಕಟರಮಣೇಗೌಡ ಬಿನ್ ಲೇಟ್ ಹೊನ್ನೇಗೌಡ, ವಾಸ ನಂ. 251, 15ನೇ ಡಿ ಕ್ರಾಸ್, 2ನೇ ಹಂತ, 2ನೇ ಫೇಸ್, ಮಹಾಲಕ್ಷ್ಮೀಪುರಂ ಲೇಔಟ್, ಬೆಂಗಳೂರು–560 086, ಇವರು ನೀಡಿರುವ ಸೂಚನೆ ಮೇರೆಗೆ ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಲೆಫ್ಟಿನೆಂಟ್ ಕರ್ನಲ್ ರಮೇಶ್ ಕೌಶಿಕ್, ವಿಳಾಸ ನಂ. 399, 11ನೇ ಕ್ರಾಸ್, ಬಿ.ಡಿ.ಎ, ಹೆಚ್.ಐ.ಜಿ ಲೇಔಟ್, ಆರ್.ಎಂ.ವಿ. 2ನೇ ಹಂತ, ಬೆಂಗಳೂರು–560 094, ಇವರಿಂದ ಕೊಂಡುಕೊಳ್ಳಲು ಇಚ್ಛೆಸಿರುತ್ತಾರೆ.

ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿ/ಗಳಿಗೆ, ಸಂಘ/ಸಂಸ್ಥೆಗಳಿಗೆ, ಯಾರಿಗಾದರು ಹಕ್ಕು, ಬಾಧ್ಯತೆ, ಹಿತಾಸಕ್ತಿಗಳು, ಮೈನರ್ ಹಕ್ಕು, ಕೋರ್ಟ್ ಅಟ್ಯಾಚ್‌ಮೆಂಟ್ ಇತ್ಯಾದಿ ಇದ್ದಲ್ಲಿ ಮತ್ತು ಈ ಕ್ರಯದ ಬಗ್ಗೆ ಯಾರಿಂದಲಾದರೂ ಯಾವುದಾದರು ತಂಟೆ ತಕರಾರು, ಆಕ್ಷೇಪಣೆಗಳು ಇದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಈ ಪ್ರಕಟಣೆ ದಿನದಿಂದ 07 (ಏಳು) ದಿನಗಳೊಳಗಾಗಿ ತಮ್ಮ ತಕರಾರು/ಆಕ್ಷೇಪಣೆಗಳನ್ನು ಸಂಬಂಧಪಟ್ಟ ದಸ್ತಾವೇಜುಗಳ ಆದಾರ ಸಹಿತವಾಗಿ ಈ ಕೆಳಗೆ ಸಹಿಮಾಡಿರುವ ನನಗೆ ಸಲ್ಲಿಸಲು ಕೋರಿದೆ.

ಒಂದು ವೇಳೆ ನಿಗಧಿತ ಅವಧಿಯಲ್ಲಿ ಯಾವುದೇ ತಕರಾರು ಅಥವಾ ಆಕ್ಷೇಪಣೆಗಳು ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತು ನಿರುಪಾಧಿಕವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಕ್ರಯದ ಮುಂದಿನ ವ್ಯವಹಾರ ಮುಂದುವರೆಸಲಿದ್ದಾರೆ ಮತ್ತು ನಿಗಧಿತ ಅವಧಿಯ ನಂತರ ಬರತಕ್ಕ ಆಕ್ಷೇಪಣೆಗಳನ್ನು ಪರಿಗಣಿಸಲಾಗವುದಿಲ್ಲವೆಂದು ತಿಳಿಯತಕ್ಕದ್ದು.

**ಷೆಡ್ಯೂಲ್**

ಬೆಂಗಳೂರು, ರಾಜಮಹಲ್ ವಿಲಾಸ ಎಕ್ಸ್‌ಟೆನ್ಷನ್ 2ನೇ ಹಂತದ ಎಕ್ಸ್‌ಟೆನ್ಷನ್ ಬ್ಲಾಕ್ ನಂ. 24ರಲ್ಲಿರುವ ಸ್ಥಿರಾಸ್ತಿ ಸ್ವತ್ತು ಹೆಚ್.ಐ.ಜಿ. (ಎಸ್ ಎಫ್ ಹೆಚ್ ಎಸ್) ಮನೆ ನಂ. 399, ಪಿಐಡಿ ನಂ. 100–767–399ರ ವಿಸ್ತೀರ್ಣ ಪೂರ್ವ–ಪಶ್ಚಿಮ (16.60+16.90)/2 ಮೀಟರ್‌ಗಳು, ಉತ್ತರ–ದಕ್ಷಿಣ: 18.40 ಮೀಟರ್‌ಗಳು, ಒಟ್ಟು ವಿಸ್ತೀರ್ಣ 308.20 ಚದರ ಮೀಟರ್‌ಗಳು (3316 ಚದರ ಅಡಿಗಳು) ಹಾಗೂ ಎಲ್ಲಾ ಹಕ್ಕು ಮತ್ತು ಮೂಲಭೂತ ಸೌಕರ್ಯವನ್ನೊಳಗೊಂಡ ಸ್ವತ್ತಿಗೆ ಚೆಕ್ಕುಬಂದಿ–

ಪೂರ್ವಕ್ಕೆ : ಸೈಟ್ ನಂ. 400
ಪಶ್ಚಿಮಕ್ಕೆ : ಸೈಟ್ ನಂ. 398
ಉತ್ತರಕ್ಕೆ : ಸೈಟ್ ನಂ. 403,
ದಕ್ಷಿಣಕ್ಕೆ : 11ನೇ ಅಡ್ಡ ರಸ್ತೆ.

ಸಿ.ಆರ್. ಕೃಷ್ಣಪ್ಪ, ವಕೀಲರು,
ನಂ. 313, 3ನೇ ಮಹಡಿ, ಕುರುಬರ ಸಂಘ ಬಿಲ್ಡಿಂಗ್,
2ನೇ ಕ್ರಾಸ್, 2ನೇ ಮೈನ್, ಗಾಂಧಿನಗರ,
ಬೆಂಗಳೂರು–560 009. ಮೊಬೈಲ್: 98455 77155
ಸ್ಥಳ: ಬೆಂಗಳೂರು. ದಿನಾಂಕ: 15–05–2023


## ನಿಧನ ಸುದ್ದಿ

### ಮರುಳಸಿದ್ಧಪ್ಪ



ಮರುಳಸಿದ್ಧಪ್ಪ

ಬೆಂಗಳೂರು: ರಾಜರಾಜೇಶ್ವರಿ ನಗರದ ನಿವಾಸಿ, ನಿವೃತ್ತ ಕಾರ್ಯನಿರ್ವಾಹಕ ಎಂಜಿನಿಯರ್ ಮರುಳಸಿದ್ದಪ್ಪ (80) ಭಾನುವಾರ ರಾತ್ರಿ ನಿಧನರಾದರು. ಇವರಿಗೆ ಇಬ್ಬರು ಪುತ್ರರು ಇದ್ದಾರೆ.

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಹಾದಿಕೆರೆ ಗ್ರಾಮದವರಾದ ಮುರುಳಸಿದ್ದಪ್ಪ ಅವರು, ಮಹಾರಾಷ್ಟ್ರ ಸರ್ಕಾರದಲ್ಲಿ ಎಂಜಿನಿಯರ್ ಆಗಿ ಮೂರು ದಶಕಗಳ ಕಾಲ ಕೆಲಸ ಮಾಡಿದ್ದರು. ರಾಜ್ಯಕ್ಕೆ ಮರಳಿದ ಮೇಲೆ ಎಂಜಿನಿಯರ್ ಸಂಘ ರಚಿಸಿ ಅನೇಕ ಸೇವಾ ಸೌಲಭ್ಯಗಳನ್ನು ಪಡೆಯಲು ಸರ್ಕಾರದ ಗಮನ ಸೆಳೆದಿದ್ದರು.ಕನ್ನಹಳ್ಳಿ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

### ಡಿ.ಕೆ. ಮಹೇಶ್



ಡಿ.ಕೆ. ಮಹೇಶ್

ಪೀಣ್ಯ ದಾಸರಹಳ್ಳಿ: ರಾಜ-ಗೋಪಾಲನಗರ ವಾರ್ಡ್ ಐ.ಪಿ. ನಗರದ ನಿವಾಸಿ, ದಾಸರಹಳ್ಳಿ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಡಿ.ಕೆ. ಮಹೇಶ್( 46) ಅವರು ಸೋಮವಾರ ನಿಧನರಾದರು.

ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ನಾಗಮಂಗಲದ ದಂಡಿಗನಹಳ್ಳಿ ಗ್ರಾಮದಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಎಂದು ಕುಟುಂಬದ ಮೂಲಗಳು ತಿಳಿಸಿವೆ.